ಓ. ಎಸ್. ನಂಬರ:-45/2024

ಪಿ.ಡಬ್ಲೂ-:-4 : ರೋಹಿತ್ ತಂದೆ ಮಹಾದೇವಯ್ಯ

ದಿನಾಂಕ:-27-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು</u> : <u>ಶ್ರೀ ಪಿ ಬಿ ಪಿ ವಕೀಲರಿಂದ</u>.

ವಾದಿ ದೇವರಾಜ ನನ್ನ ಗೆಳೆಯನಾಗಿರುತ್ತಾನೆ. ವಾದಿ ನನ್ನನ್ನು ಸಾಕ್ಷ್ಯ ನುಡಿಯಲು ಕರೆದುಕೊಂಡು ಬಂದಿರುತ್ತಾನೆ ಎಂದರೆ ಸರಿಯಲ್ಲ. ಈ ದಿನ ಅಫಜಲಪೂರಗೆ ನಾನು ಮತ್ತು ವಾದಿ ಕೂಡಿ ಬಂದಿರುತ್ತೇವೆ ಎಂದರೆ ಸರಿ. ಈ ಹಿಂದೆ ಕೂಡಾ ಅಫಜಲಪೂರಕ್ಕೆ ನಾನು ಮತ್ತು ವಾದಿ ಕೂಡಿ ಬಂದಿದ್ದೇವು ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಬರೆದ ವಿಚಾರಗಳು ನನಗೆ ಗೊತ್ತು. ದಾವಾ ಆಸ್ತಿಯ ಸರ್ವೆ ನಂಬರ ೪೬/೩ ಇರುತ್ತದೆ. ಸದರಿ ಸರ್ವೆ ನಂಬರನ್ನು ನನಗೆ ಪ್ರತಿವಾದಿ ಹೇಳಿರುತ್ತಾರೆ. ನಾನು ದಾವಾ ಜಮೀನನ್ನು ನೋಡಿರುವುದಿಲ್ಲ. ಪ್ರತಿವಾದಿ ಶಾವರಸಿದ್ದ ಮತ್ತು ನನಗೂ ೫-೬ ವರ್ಷದಿಂದ ಪರಿಚಯ ಇರುತ್ತದೆ.

೨. ದಾವಾ ಜಮೀನು ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಮತ್ತು ದಾವಾ ಜಮೀನಿನ ಚೆಕ್ಕುಬಂದಿ ಏನು ಇರುತ್ತದೆ ಎಂದು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-೧ ಖರೀದಿ ಪತ್ರದ ಇಸಾರಪಾವತಿ ದಾಖಲೆ ಮಾಡುವಾಗ ನಾನು ಹಾಜರಿದ್ದೆ. ನಿಪಿ-೧ ರ ಬಾಂಡ್ ಪೇಪರನ್ನು ದಿನಾಂಕ 08-12-2023 ರಂದು ಖರೀದಿ ಮಾಡಿರುತ್ತಾರೆ. ಅದನ್ನು ಪ್ರತಿವಾದಿ ಶಾವರಸಿದ್ದರವರು ಖರೀದಿಸಿರುತ್ತಾರೆ. ನಿಪಿ-೧ ರಲ್ಲಿ ನಾನೂ ಕೂಡಾ ಸಹಿ ಮಾಡಿರುತ್ತೇನೆ. ನಿಪಿ-

೧ ನ್ನು ನೋಟರಿ ಮಾಡಿಸಿಲ್ಲ ಎಂದರೆ ಸರಿ. ನಿಪಿ-೧ ಕಡ್ಡಾಯವಾಗಿ ನೋಟರಿ ಆಗಬೇಕು ಎಂದರೆ ನನಗೆ ಮಾಹಿತಿ ಇಲ್ಲ. ನಿಪಿ-೧ ರ ದಾಖಲೆ ಮಾಡಿಕೊಳ್ಳುವಾಗ ಪ್ರತಿವಾದಿಯ ತಂದೆಯ ಸಹಿ ಪಡೆಯಲಾಗಿರುತ್ತದೆ. ಪ್ರತಿವಾದಿಯ ತಾಯಿ ಮತ್ತು ಅಕ್ಕ-ತಂಗಿಯರ ಸಹಿಗಳನ್ನು ನಿಪಿ-೧ ರ ದಾಖಲೆಗೆ ಪಡೆದಿರುವುದಿಲ್ಲ. ನಾನು ಮತ್ತು ವಾದಿ ಮತ್ತು ನಮ್ಮ ಗೆಳೆಯರು ಎಲ್ಲರು ಸೇರಿಕೊಂಡು ನಿಪಿ-೧ ನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-೧ ರ ದಾಖಲೆಯಾದ ದಿನ ರೂ.೧೫,೦೦,೦೦೦/- ವಾದಿ ಪ್ರತಿವಾದಿಗೆ ನೀಡಿರುತ್ತಾರೆ. ಸಾಕ್ಷಿಯು ಉಳಿದ ರೂ.೧೯,೦೦,೦೦೦/- ವಾದಿ ಪ್ರತಿವಾದಿಗೆ ನೀಡಬೇಕಾಗಿತ್ತು ಎನ್ನುತ್ತಾರೆ. ಪ್ರತಿವಾದಿಗೆ ಯಾವುದೆ ಹಣವನ್ನು ನಾಣು ಹೇಳಿದಂತೆ ನೀಡಿಲ್ಲ ಮತ್ತು ನಾವೆ ನಿಪಿ-೧ನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

೩. ಸುಮಾರು ೧೫ ರಿಂದ ೨೦ ಲಕ್ಷ ವ್ಯವಹಾರಗಳು ಸಾಮಾನ್ಯವಾಗಿ ನೋಟರಿರವರ ಮುಂದೆ ಮಾಡುತ್ತಾರೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ನಿಪಿ-೧ ವ್ಯವಹಾರದ ಕುರಿತು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಡಿ ಡಿ ಅಥವಾ ರಶೀದಿ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಊರು ಬೆಂಗಳೂರು ಆಗಿರುತ್ತದೆ. ಕೂಡಿಗನೂರ ಗ್ರಾಮದಲ್ಲಿ ನನಗೆ ಶಿವರಾಜ ಮತ್ತು ಅವರ ತಮ್ಮ ಮತ್ತು ನಾಗೇಶರವರು ಪರಿಚಯ ಇರುತ್ತಾರೆ. ವಾದಿಗೂ ಕೂಡಾ ಸದರಿ ವ್ಯಕ್ತಿಗಳು ಪರಿಚಯ ಇರುತ್ತಾರೆ ಎಂದರೆ ಸರಿ. ಸದರಿ ಶಿವರಾಜ, ನಾಗೇಶ ಮತ್ತು ಶಿವರಾಜರವರ ತಮ್ಮನ ಸಹಿಗಳು ನಿಪಿ-೧ ರಲ್ಲಿ ಇಲ್ಲ ಎಂದರೆ ಸರಿ. ನಾನು ಮತ್ತು ವಾದಿ ನಿಪಿ-೧ನ್ನು ಸೃಷ್ಠಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ನನ್ನ ಗೆಳೆಯನಾಗಿದ್ದರಿಂದ

ಅವರಿಗೆ ಸಹಾಯ ಮಾಡಲು ನಾನು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.